

‘ಅರುಣ... ಬಲರಾಮ್ ಸರ್‌ಗೆ ಹಾರ್ಟ್ ಅಟ್ಯಾಕ್ ಆದಂಗಿದೆ. ಬದುಕಿದ್ದಾರೊ ಇಲ್ಲವೊ ಗೊತ್ತಾಗ್ತ ಇಲ್ಲ. ಮೈ ತಣ್ಣಗಾಗಿದೆ. ಮೂಗಲ್ಲಿ ಸ್ವಲ್ಪ ಬ್ಲೀಡಿಂಗ್ ಆಗಿದೆ...’ ಅಂತ ಗಣಪತಿ ಒಂದೇ ಉಸಿರಲ್ಲಿ ಹೇಳಿ ನಿಲ್ಲಿಸಿದ.

ಕೆಲವು ಸೆಕೆಂಡುಗಳ ನಂತರ ಮತ್ತೆ ಅವನೇ, ‘ಒಂದೂ ಹದಿನೈದಕ್ಕೆ ನನಗೆ ಫೋನ್ ಮಾಡಿದ್ರು. ಫೋನ್ ಮ್ಯೂಟ್‌ನಲ್ಲಿತ್ತು. ಎರಡು ಗಂಟೆಗೆ ಎಚ್ಚರವಾಗಿ ನೋಡಿ ಅವರಿಗೆ ಫೋನ್ ಮಾಡಿದೆ. ರೆಸ್ಪಾನ್ಸ್ ಬರಲಿಲ್ಲ. ಕೂಡಲೇ ಮನೆಗೆ ಹೋಗಿ ನೋಡಿದೆ. ಸರ್, ತಲೆ ಪಕ್ಕಕ್ಕೆ ಹೊರಳಿಸಿ ಮಲಗಿದ್ದು ಕಾಣಿಸ್ತು. ಅವರ ಎದೆ ಮೇಲೆ ಕಿವಿ ಇಟ್ಟು ಹಾರ್ಟ್ ಬೀಟ್ ಕೇಳಿಸಬಹುದೇ ಅಂತ ನೋಡಿದೆ, ಹಾರ್ಟ್ ನಿಂತು ಹೋಗಿದೆ ಅನ್ನಸ್ತೆ. ನಿನಗೆ ಎರಡು ಸಲ ಫೋನ್ ಮಾಡಿದೆ. ಕನೆಕ್ಟ್ ಆಗಲಿಲ್ಲ, ಬೇಗ ಹೊರಟು ಬಾ ಮಾರಾಯ, ಏನು ಮಾಡಬೇಕು ಅಂತ ನನಗೆ ಗೊತ್ತಾಗ್ತ ಇಲ್ಲ’ ಅಂದ.

‘ಏನೂ ಆಗಲ್ಲ, ಹೆದರಬೇಡ. ಮೊದಲು ಅಕ್ಕ ಪಕ್ಕದವರಿಗೆ ವಿಷಯ ತಿಳಿಸು. ಮೂಗಲ್ಲಿ ಬ್ಲೀಡಿಂಗ್ ಆಗಿದೆ ಅಂತೀಯ. ನ್ಯಾಚುರಲ್ ಡೆತ್ತೇ ಆಗಿರಬಹುದು. ನೀನೇ ಬೀಗ ತೆಗೆದು ಮನೆಯೊಳಕ್ಕೆ ಹೋಗಿದ್ದೀಯಲ್ವ, ಮೊದಲು ಪೊಲೀಸರಿಗೆ ಫೋನ್ ಮಾಡಿ ತಿಳಿಸು. ಅವರು ಬರೋದು ಬೆಳಿಗ್ಗೇನೆ. ನಾನೂ ಬೆಳಿಗ್ಗೆ ಬರ್ತೀನಿ. ಕಾರು ಸರ್ವೀಸಿಗೆ ಬಿಟ್ಟಿದ್ದೇನೆ. ಒಂದು ಕೆಲಸ ಮಾಡು, ಬೀಗ ಹಾಕ್ಕಂಡು ಮನೆಗೆ ಹೋಗಿ ಮಲಕ್ಕೊ. ಬೆಳಿಗ್ಗೆ ನಾನು ಬರ್ತೀನಿ’ ಅನ್ನುತ್ತ, ‘ಮತ್ತೇನು?’ ಅಂತ ಕೇಳಿ ಆಮೇಲೆ ಫೋನ್ ಕಟ್ ಮಾಡಿದ. ಗಣಪತಿಗೆ ನಿರಾಳವೆನಿಸಿತು.

★★★

‘ಸಾರ್, ನನ್ನ ಹೆಸರು ಗಣಪತಿ ಅಂತ. ಇದೇ ಊರಲ್ಲಿ ಆಚಾರ್ಯ ಕಾಲೇಜಲ್ಲಿ ಕನ್ನಡ ಲೆಕ್ಚರರ್. ರಾತ್ರಿ ಹತ್ತರತನಕ ನಾನು ಸರ್ ಜತೆಯಲ್ಲೇ ಇದ್ದೆ. ನನಗೆ ನಿದ್ದೆ ಬರ್ತಿದೆ ಮಲಗ್ತೀನಿ, ನೀನು ಮನೆಗೆ ಹೋಗು ಅಂದರು. ನಾನೇ ಮೇನ್‌ಡೋರ್ ಲಾಕ್ ಮಾಡಿಕೊಂಡು ಬಂದೆ. ರಾತ್ರಿ ಹೊತ್ತಲ್ಲಿ ನಂಗೇನಾದರೂ ಆದರೆ ಬಾಗಿಲು ಒಡಕೊಂಡು ಒಳಕ್ಕೆ ಬರೋದು ತಪ್ಪುತ್ತೆ ಅಂತ ಹೇಳಿ ಅವರೇ ನಂಗೂ ಒಂದು ಕೀ ಕೊಟ್ಟಿದ್ದರು. ಒಂದೂ ಹದಿನೈದಕ್ಕೆ ಅವರಿಂದ ಫೋನ್ ಬಂದಿತ್ತು. ಫೋನ್ ಸೈಲೆಂಟ್ ಮೋಡಲ್ಲಿಟ್ಟಿದ್ದೆ. ಎರಡು ಗಂಟೆಗೆ ಎಚ್ಚರವಾಗಿ ನೋಡಿ ಅವರಿಗೆ ಫೋನ್ ಮಾಡಿದೆ. ರಿಸೀವ್ ಮಾಡಲಿಲ್ಲ. ಆಮೇಲೆ ನಾನೇ ಬೀಗ ತೆಗೆದು ಮನೆಯೊಳಕ್ಕೆ ಹೋದೆ. ಮೂರ್ನಾಲ್ಕು ಸಲ ಸಾರ್, ಸಾರ್ ಅಂತ ಜೋರಾಗಿ ಕೂಗಿದೆ. ಹಣೆ ಮೇಲೆ ಕೈಯಿಟ್ಟು ನೋಡಿದೆ, ತಣ್ಣಗಿತ್ತು. ಮೂಗಲ್ಲಿ ಸ್ವಲ್ಪ ಬ್ಲೀಡಿಂಗ್ ಆಗಿತ್ತು. ತಕ್ಷಣ ಸರ್ ಅವರ ಮಗ ಅರುಣನಿಗೆ ಫೋನ್ ಮಾಡಿ ವಿಷಯ ತಿಳಿಸಿದೆ. ನಿಮ್ಮ ಸ್ಟೇಷನ್ನಿಗೆ ಫೋನ್ ಮಾಡಿದ್ದೂ ನಾನೇ. ಆಮೇಲೆ ಅಕ್ಕಪಕ್ಕದ ಮನೆಯವರಿಗೆ ತಿಳಿಸಿದೆ. ಕೆಲವರು ಬಂದು ನೋಡಿದರು. ಪಕ್ಕದ ಮನೆಯ ಹಿರಿಯರೊಬ್ಬರು ಜೀವ ಹೋಗಿದೆ, ಸರಿಯಾಗಿ